# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೨೩೫೮೪, ೨೬೬೧೨೯೮೭ ಫ್ಯಾಕ್ಸ್ : ೨೬೫೨೯೮೬೭
http://www.kasapa.in e-mail : kannadaparishattu@gmail.com


ಕ್ರಮಸಂಖ್ಯೆ : ಕಸಾಪ / ದತ್ತಿ ಕಾರ್ಯಕ್ರಮ / ೨೦೨೧–೨೨ ದಿನಾಂಕ : ೦೭–೦೧–೨೦೨೨

ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
........................................ಬೆಂಗಳೂರು

ಮಾನ್ಯರೆ,

## ಪತ್ರಿಕಾ ಹೇಳಿಕೆ – ಪ್ರಕಟಣೆ ಕೃಪೆಗಾಗಿ

**ಹಿರಿಯ ಲೇಖಕಿ ಶ್ರೀಮತಿ ನುಗ್ಗೇಹಳ್ಳಿ ಪಂಕಜ ಅವರಿಗೆ**

**ಡಾ. ಬಿ. ಸರೋಜಾದೇವಿ ಸಾಹಿತ್ಯ ದತ್ತಿ ಪ್ರಶಸ್ತಿ**

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ **ದಿನಾಂಕ ೦೪–೦೧–೨೦೨೨** ರಂದು **ನಾಡೋಜ ಡಾ. ಮಹೇಶ ಜೋಶಿ ಅವರ ಅಧ್ಯಕ್ಷತೆಯಲ್ಲಿ** ನಡೆದ ಆಯ್ಕೆ ಸಮಿತಿ ಸಭೆಯಲ್ಲಿ **೨೦೨೧ನೆಯ ಸಾಲಿಗೆ "ಡಾ. ಬಿ ಸರೋಜಾದೇವಿ ಸಾಹಿತ್ಯ ದತ್ತಿ (ಸುಪುತ್ರಿ ಬಿ. ಭುವನೇಶ್ವರಿ ಸ್ಮರಣಾರ್ಥ) ಪ್ರಶಸ್ತಿ**"ಗೆ ಹಿರಿಯ ಲೇಖಕಿ **ಶ್ರೀಮತಿ ನುಗ್ಗೇಹಳ್ಳಿ ಪಂಕಜ** ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಶಸ್ತಿಯ ಮೊತ್ತ **ರೂ. ೧೫,೦೦೦ (ಹದಿನೈದು ಸಾವಿರ ರೂಪಾಯಿ ಮಾತ್ರ)** ನಗದು, ಸ್ಮರಣಿಕೆ ಹಾಗೂ ಫಲ ತಾಂಬೂಲಗಳನ್ನು ಒಳಗೊಂಡಿರುತ್ತದೆ.

೯೩ ವರ್ಷಗಳ ಹಿರಿಯರಾದ ನುಗ್ಗೇಹಳ್ಳಿ ಪಂಕಜ ಅವರು **೨ ಜೂನ್ ೧೯೨೯** ರಂದು ಜನಿಸಿದರು. ಇವರು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಬರೆಯುವ ಭಾರತೀಯ ಬರಹಗಾರ್ತಿ ಮತ್ತು ಕವಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕನ್ನಡ ಭಾಷೆಯ ಪ್ರಮುಖ ಲೇಖಕರಲ್ಲಿ ಇವರೂ ಕೂಡ ಒಬ್ಬರು.

ಇವರು ಸಂಪಾದಿಸಿರುವ **ಕಾದಂಬರಿಗಳಲ್ಲಿ** ಪ್ರಮುಖವಾದವುಗಳೆಂದರೆ, **ಕಾವೇರಿಯ ಅರ್ಥರವ, ಉಷಾನಿಷಿ, ಮಲಯಾ ಮಾರುತ, ವೀಣಾ ಓಹ್ ವೀಣಾ!, ಮುಗಿಲಮಿಂಚು, ಗಗನ** ಮುಂತಾದವುಗಳು.

**ಅರ್ಧ ಚಂದ್ರ, ಇಪ್ಪತ್ತು ವರ್ಷಗಳ ಹಿಂದೆ, ತಾಯಿ ಮರ, ಸೇವಕಿಯ ಶಿಕ್ಷಣ** ಮುಂತಾದ ಸಣ್ಣಕಥೆಗಳನ್ನು ರಚಿಸಿರುತ್ತಾರೆ.

**ಸಾಲೋಮ್, ಆ ಒಂದು ವಿಷದ ಘಳಿಗೆ, ಅರಳಿಕಟ್ಟೆ ರಾಮಾಚಾರಿಯ ಎರಡನೇ ಹೆಂಡತಿ** ಇವರು ಸಂಪಾದಿಸಿರುವ **ನಾಟಕಗಳು.**

ಇವರ "ಬರಲೆ ಇನ್ನು ಯಮುನೆ" ಕಾದಂಬರಿಯು ಸಿಪಾಯಿ ರಾಮು ಹೆಸರಿನಲ್ಲಿ ಚಲನಚಿತ್ರವಾಗಿ ಜನಪ್ರಿಯವಾಯಿತು. 'ಬಳ್ಳಿ ಮೊಗ್ಗು' ಕೃತಿಗೆ ೧೯೭೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಉತ್ತಮ ಮಹಿಳಾ ಪುಸ್ತಕ ಬಹುಮಾನ ದೊರೆತಿದೆ.

ಆಯ್ಕೆ ಸಮಿತಿ ಸಭೆಯಲ್ಲಿ ಸದಸ್ಯರುಗಳಾದ **ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ,** ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ಶ್ರೀ ನೇ. ಭ ರಾಮಲಿಂಗಶೆಟ್ಟಿ,** ಗೌರವ ಕೋಶಾಧ್ಯಕ್ಷರಾದ **ಶ್ರೀ ಪಟೇಲ್‌ಪಾಂಡು** ಅವರುಗಳು ಉಪಸ್ಥಿತರಿದ್ದರು.

**(ನಾಡೋಜ ಡಾ. ಮಹೇಶ ಜೋಶಿ)**
ಅಧ್ಯಕ್ಷರು